

# ಹಿಮಾಲಯದ ರಮ್ಯತಾಣ ರೋಲಿ ಖೋಲಿ

■ ವೈದ್ಯನಾಥ್ ಹೆಚ್.ಯು.

ಹಿಮಾಲಯವೇ ಹಾಗೆ. ತನ್ನೊಳಗೆ ಅನೇಕಾನೇಕ ನಿಗೂಢಗಳನ್ನು ಅಡಗಿಸಿಟ್ಟುಕೊಂಡು, ಪ್ರವಾಸಿಗರನ್ನು, ಚಾರಣಿಗರನ್ನು, ಸಾಹಸಿಗರನ್ನು ರೋಮಾಂಚನಗೊಳಿಸುತ್ತಲೇ ಇರುತ್ತದೆ. ಹಾಗೆ ಹಿಮಾಲಯದಲ್ಲಿನ ರೋಲಿ ಖೋಲಿ ಕೂಡ ದುರ್ಗಮ ಹಾಗೂ ರಮ್ಯ ಸುಂದರ ತಾಣ.

ಇಂಥ ರಮಣೀಯ ಸ್ಥಳಕ್ಕೆ ಶಿವಮೊಗ್ಗದ ಯುವಜನ ಚಾರಣ ಸಂಸ್ಥೆಯಿಂದ ಸುಮಾರು ಐವತ್ತು ಮಂದಿಯ ನಮ್ಮ ತಂಡ ಚಾರಣಕ್ಕೆ ಹೊರಟೆವು. 20 ವರ್ಷದಿಂದ 70 ವಯೋಮಾನದ ಉತ್ಸಾಹಿಗಳು ಪಾಲ್ಗೊಂಡಿದ್ದರು. ಏಳು ದಿನಗಳ ಚಾರಣ ಇದು.

ರೋಲಿ ಖೋಲಿ ಹಿಮಾಚಲ ಪ್ರದೇಶದ ಕುಲು ಸಮೀಪವಿದೆ. ಬಿಯಾಸ್ ನದಿ ತಟದ ಸಿಯೋಭಾಗ್, ರೋಲಿ ಖೋಲಿ ಸೇರಿದಂತೆ ಹಿಮಾಚಲ ಪ್ರದೇಶದ ಪರ್ವತ ಶ್ರೇಣಿಗಳ ಚಾರಣಕ್ಕೆ ಬೇಸ್ ಕ್ಯಾಂಪ್. ಅಲ್ಲಿಯೇ ಎದುರಿನ ಪರ್ವತ ಶ್ರೇಣಿಯ ನಡುವೆ ಆರಂಭದಲ್ಲಿ ವಾತಾವರಣಕ್ಕೆ ಹೊಂದಿಕೊಳ್ಳುವ ಸಲುವಾಗಿ ಚಿಕ್ಕದೊಂದು ಚಾರಣ. ಈ ಸಣ್ಣ ಚಾರಣ ಕೂಡ ಸವಾಲಿನದೇ. ಹಚ್ಚ ಹಸಿರಿನ ನಡುವೆಯೇ ಸಾಗುವುದರಿಂದ ದಣಿವಾಗುವುದಿಲ್ಲ. ಜೊತೆಗೆ ಸ್ಥಳೀಯ ಗ್ರಾಮೀಣ ಸೊಗಡು, ಅಲ್ಲಲ್ಲಿ ಸಿಗುವ ವಿಶಿಷ್ಟ ಮನೆಗಳ ವಿನ್ಯಾಸ, ಮುದ್ದಾದ ಪುಟ್ಟ ಪುಟ್ಟ ಮಕ್ಕಳನ್ನು ಗಮನಿಸುತ್ತಾ ನಡೆಯುವುದೇ ಒಂದು ಅನುಭೂತಿ.

ಮರುದಿನ ಬೆಳಗಿನ ಜಾವ ಆರು ಗಂಟೆಗೇ ರೋಲಿ ಖೋಲಿ ಚಾರಣಕ್ಕೆ ಪ್ರಯಾಣ. 40ಕ್ಕೂ ಹೆಚ್ಚು ತಿರುವುಗಳುಳ್ಳ ಘಾಟಿಯನ್ನು ದಾಟಿ, ಚಾರಣದ ಆರಂಭ ಸ್ಥಳವನ್ನು ತಲುಪಿದಾಗ 10 ಗಂಟೆಯ ಸಮಯ. ಸುದೀರ್ಘ ಪ್ರಯಾಣ ಅದು. ನಮ್ಮನ್ನೆಲ್ಲಾ ತಂದು ಹಾಕಿ, ವಾಹನಗಳು ಹಿಂದಿರುಗುತ್ತಲೇ, ನಮ್ಮ ಚಾರಣ ಆರಂಭ.

ಮೊದಲ ದಿನ ನಾಲ್ಕು ಕಿ.ಮೀ. ಚಾರಣದಲ್ಲಿ 9600 ಅಡಿ ಎತ್ತರದ ಕೋಕಿನಾಲ ತಲುಪಿ, ಸುತ್ತಲೂ ಎತ್ತರದ ಪರ್ವತ ಶ್ರೇಣಿಯ ನಡುವೆ ಪುಟ್ಟ ಪುಟ್ಟ ಮಕ್ಕಳಂತೆ ಆನಂದಿಸಬಹುದು. ಈ ಎತ್ತರದ ಪರ್ವತಗಳು ನಮ್ಮನ್ನು ಸಲಹುತ್ತಿವೆಯೇನೋ ಎಂಬ ಆಪ್ತಭಾವ ಮೂಡುತ್ತದೆ. ಈ ಮಾರ್ಗವು ಓಕ್, ಸೀಡರ್ ಮತ್ತು ಸಿಲ್ವರ್ ಬರ್ಚ್ ಮರಗಳಿಂದ ಕೂಡಿದ ಪ್ರಾಚೀನ ಮತ್ತು ಕಚ್ಚಾ ಕಾಡುಗಳಿಗೆ ಹೆಸರುವಾಸಿ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಈ ಕೋಕಿನಾಲ ಸೇರಿದಂತೆ ಮುಂದೆ ಸಾಗುವ ಯಾವ ಬೇಸ್ ಕ್ಯಾಂಪ್‌ನಲ್ಲೂ ಕರೆಂಟ್ ಇಲ್ಲ. ಟೆಂಟ್‌ಗಳಲ್ಲಿಯೇ ವಾಸ್ತವ್ಯ. ಇದನ್ನು ಅನುಭವಿಸಿಯೇ ತೀರಬೇಕು.

ಎರಡನೇ ದಿನ ಇನ್ನಷ್ಟು ಎತ್ತರಕ್ಕೆ ಅಂದರೆ, 10200 ಅಡಿ ಏರಬೇಕು. ಅದು ಲಾಮಾ ಡೋ ಬೇಸ್ ಕ್ಯಾಂಪ್. ಇಲ್ಲಿ ಕ್ರಮೇಣ ಹಸಿರು ಕಡಿಮೆಯಾಗಿ, ಹಿಮ ಆವರಿಸಿಕೊಳ್ಳಲು ಆರಂಭಿಸುತ್ತದೆ. ತೀವ್ರತರವಾದ ಚಳಿಗಾಳಿ ಬೀಸಲಾರಂಭಿಸುತ್ತದೆ. ಹಾಗೆಯೇ ಆಮ್ಲಜನಕದ ಕೊರತೆಯನ್ನೂ ಎದುರಿಸಬೇಕಾಗುತ್ತದೆ.

